ಸುದ್ದಿ ಇನ್ನೇನಯ್ಯ ಈ ಮಾದೇವನಿಗೆ! ಇನ್ನು ನನ್ನ ಕಥೆ ಕೇಳು. ನಾನು ಒಬ್ಬನೇ ಇದೀನಿ ಅಂತ ನಿಂಗೆ ಯಾರ್ ಹೇಳಿದ್ರೋ ಏನೋ ಗೊತ್ತಿಲ್ಲ... ನಾನು ಊರು ಬಿಟ್ಟು ವಾಪಾಸ್ ಬರೋವಾಗ ನಲವತ್ತೈದು ದಾಟಿದ್ದು ಹೌದು. ವಯಸ್ಸಾದ ಅಮ್ಮನ್ನ ನೋಡ್ಲಿಕ್ಕೆ ಬಂದವ ಇಲ್ಲೇ ಉಳಿದುಬಿಟ್ಟೆ. ಅಷ್ಟೂ ವರ್ಷ ಯಾವ ಜವಾಬ್ದಾರಿನೂ ಇಲ್ಲದೇ ಒಂಥರಾ ನಿರುಮ್ಮಳವಾಗಿದ್ದ ನನಗೆ ಒಂದೊಂದೇ ಬಂಧನಗಳು ಅಂಟಿಕೊಂಡುಬಿಟ್ಟವು. ಅದನ್ನೆಲ್ಲಾ ಈಗ ಬಿಡಿಸಿ ಹೇಳೋದಿಲ್ಲ. ಐದಾರು ವರ್ಷ ನರಳಿ ಅಮ್ಮ ಸತ್ ಹೋದ್ಲು. ಅವಾಗ ಒಂಟಿಯಾಗಿ ಇರೋದು ನರಕ ಅನ್ನಿಸ್ಲಿಕ್ಕೆ ಶುರು ಆಯ್ತು. ಎಷ್ಟು ಅಂದ್ರೆ ಹೊಳೇನೋ ಬಾವಿನೋ ಹಾರಿಬಿಡೋಣ ಅನ್ನಿಸೋವಷ್ಟು! ಅಮ್ಮನ್ನ ನೋಡ್ಕೊಳ್ಳಕ್ಕೆ ಅಂತ ಒಬ್ಬಳು ಸಜ್ಜನ ಹೆಂಗಸು ಬರ್ತಾ ಇದ್ಲು. ಅವಳಿಗೆ ಗಂಡ ಎಲ್ಲಿ ಓಡಿ ಹೋಗಿದ್ದನೋ ಸತ್ತೇ ಹೋಗಿದ್ದನೋ ಅಂತೂ ಇವ್ಳ ಜೊತೆ ಇರ್ಲಿಲ್ಲ. ಒಬ್ಬ ಮಗ ಇದ್ದ. ವಯಸ್ಸೇನೂ ಕಡಿಮೆ ಆಗಿರ್ಲಿಲ್ಲ ಬಿಡು. ಅವನಿಗೆ ಮದುವೆ, ಹಬ್ಬ ಎಂತದು ಇದ್ದ ಹಾಗೆ ಇಲ್ಲ. ಅದೆಲ್ಲೋ ಇದ್ದು, ಅಮ್ಮನಿಗೆ ದುಡ್ ಕಳಿಸ್ತಾ ಇದ್ದ. ಅಲ್ಲಿಗೆ ತನ್ನ ಜವಾಬ್ದಾರಿ ಮುಗೀತು ಅಂತ ಅಂದುಕೊಂಡಿದ್ದ ಅಂತ ಕಾಣುತ್ತೆ. ಯಾವತ್ತೂ ಅಮ್ಮನ್ನ ನೋಡ್ಲಿಕ್ಕೆ ಬಂದವನೇ ಅಲ್ಲ... ಮಾತುಮಾತಿಗೆ ಅವಳು, ಹೇಳ್ತಾ ಇದ್ಲು, 'ನಮ್ಮ ನರಸಿಮ್ಮ ಒಂದಲ್ಲಾ ಒಂದಿನ ಅಮ್ಮನ್ನ ನೋಡ್ಲಿಕ್ಕೆ ಬಂದೇ ಬರ್ತಾನೆ' ಅಂತ. ಆದರೆ ಅವನು ಯಾವತ್ತೂ ಬರ್ಲೆ ಇಲ್ಲ... ಅದು ಹೇಗೋ ಏನೋ ಅವಳು, ನಾನು ಒಟ್ಟಿಗೇ ಸಂಸಾರ ಮಾಡೋಕೆ ಶುರು ಮಾಡಿಬಿಟ್ವೆವು! ಊರಿನವರು ಏನೇನೋ ಮಾತಾಡಿಕೊಂಡಿರಲೂಬಹುದು... ಅದರೆ ನಾವಿಬ್ರು ವಯಸ್ಸಾದವರು ಅಂತಾನೋ ಏನೋ ಅವರ ಕಿವಿ- ನಾಲಗೆಗೆ ರುಚಿ ಹತ್ತಲಿಲ್ಲ ಅಂತ ಕಾಣುತ್ತೆ, ಸ್ವಲ್ಪ ದಿನಕ್ಕೆ ಸುಮ್ಮನಾದ್ರು! ನ್ಯಾಲೆ ಮೇಲೆ ತೊಳೆದು ಹರವಿದ ಹೆಂಗಸರ ಬಟ್ಟೆ ಒಣಗ್ತಾ ಇದ್ರಷ್ಟೇ ಅದು ಮನೆ ಅಂತ ಕರ್ಸಿಕೊಳ್ಳೋದು. ಅದು ತಾಯಿಯದ್ದೋ, ಮಗಳದ್ದೋ, ಮೊಮ್ಮಗಳದ್ದೋ! ಏನಂತೀಯಾ?

**ಅನಿರುದ್ಧ, ಮುರಳೀಧರನಿಗೆ:**

ಅಜ್ಜಯ್ಯ, ನಾನು ನಿನಗೊಂದು ವಿಚಾರ ಹೇಳಬೇಕು ಅಂತ ಆವಾಗ್ಲಿಂದ ಅಂದುಕೊಳ್ತಾ ಇದ್ದೆ. ಅದು ನನ್ನ ಮತ್ತು ಅಮ್ಮನ ನಡುವೆ ನಡೆದ ಮಾತುಕತೆ ಬಗ್ಗೆ... ಇರಲಿ ಅದನ್ನ ಆಮೇಲೆ, ಹೇಳ್ತೀನಿ. ನಿನ್ನ ಮನೆ ಕಟ್ಟಿಸೋ ಯೋಜನೆ ಒಳ್ಳೆಯದ್ದೇ ಅಂತ ಯಾವಾಗ್ಲೂ ಹೇಳಿದೀನಿ, ಈಗ ಇನ್ನು ಒತ್ತಿ ಹೇಳ್ತೀನಿ. ನಾನೂ ಬಿಡುವಿನ ಹೆಚ್ಚು ದಿನ ಇಲ್ಲೇ ಇರ್ತೀನಿ. ಆದರೆ ನಿನ್ನ ಕನಸನ್ನು ಸ್ವಲ್ಪ ಮುಂದಕ್ಕೆ ಹಾಕು... ಈಗಷ್ಟೇ ಅಮ್ಮ ಫೋನ್ ಮಾಡಿದ್ಲು, ಈ ಭಾನುವಾರ ನಾವೆಲ್ಲಾ ಬೆಂಗಳೂರಲ್ಲಿ ಇರ್ಲೇಬೇಕು. ಯಾಕೆ ಏನು ಅಂತೆಲ್ಲ ಹೇಳ್ತೀನಿ... ಕಾರ್‌ನಲ್ಲಿ ಹೇಳೋಕೆ ಭಾಳ ವಿಷಯ ಇದೆ. ನೋಡು ಅಜ್ಜಯ್ಯ, ನಾನು ಮುಂದಿನ ವರ್ಷ ಅಮೆರಿಕದಿಂದ ಬರೋವಷ್ಟರಲ್ಲಿ ನಿನ್ನ ಮನೆ ರೆಡಿ ಆಗಿರ್ಬೇಕು!

**ಮಾದೇವ ಮುರಳೀಧರನಿಗೆ:**

ನನ್ನ ಸುನಂದಳಿಗೆ ಬೆಂಗಳೂರು ಪ್ರವಾಸದ ಪುಣ್ಯ ಬಂದಿದೆ ಅಂತ ಕಾಣುತ್ತೆ! ಅವಳ ಮಗನ ಫೋನ್ ಬಂದಿತ್ತಂತೆ. ಈ ಭಾನುವಾರ ಬೆಂಗಳೂರಿಗೆ ಬರಲೇಬೇಕಂತೆ. ಮುರಳಿ, ನಾವೂ ನಿನ್ ಕಾರಲ್ಲೇ ಬಂದ್ ಬಿಟ್ರೆ ಹ್ಯಾಗೆ ಅಂತ ಯೋಚಿಸ್ತಾ ಇದೀನಿ... ಬಂದ್ ಬಿಡ್ತೀವಿ ಕಣೋ... ನಾಕು ಜನಾನು ಒಟ್ಟಿಗೇ ಹೋಗೋಣ.

**ಸುಮಂಗಲ ಸುನಂದಮ್ಮನಿಗೆ:**

ವಿಷಯ ಗೊತ್ತಾಗಿರಬೇಕಲ್ಲವ, ಸುನಂದಮ್ಮ? ನಮ್ಮ ಮನೆಯವರು ಇಷ್ಟ್ ಹೊತ್ತಿಗೇ ಡಂಗ್ರ ಸಾರಿರ್ತಾರೆ ಬಿಡಿ. ನಾವು ಊರಿಗೆ ಬಂದು, ಅಲ್ಲೇ ಇರೋಣ ಅಂತ ಇದೀವಿ... ಇಲ್ಲಾದ್ರೂ ನಮಗೆ ಏನು ಉಳಿದಿದೆ? ಮಗನಿಗಾಗಿ ಬಂದೆವು- ಅವನು ಹೋಗಿಬಿಟ್ಟ... ಇನ್ನು, ಮಗಳು -ಸೊಸೆ- ಮೊಮ್ಮಕ್ಕಳು... ಅವರದ್ದೇ ಲೋಕದಲ್ಲಿ ಚೆನ್ನಾಗಿ ಇರ್ತಾರೆ ಬಿಡಿ. ನಿಮ್ಮ ವಿಚಾರ ಕೇಳಿ ಸಂತೋಷ ಆಯ್ತು, ಸುನಂದಮ್ಮ, ಕೊನೆಗೂ ನಿಮ್ಮ ಮಗ ನಿಮಗೇ ಸಿಕ್ಕಿದ! ನಂಗೂ ಮಗ ಸಿಕ್ಕಿದ ಹಾಗೇ ಆಯಿತು ಅಲ್ವೇ?!